# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ: ಬೆಂಗಳೂರು

## ಪತ್ರಿಕಾ ಪ್ರಕಟಣೆ

## ಕೆಎಸ್‌ಆರ್‌ಟಿಸಿಗೆ 225 ನೇ ಪ್ರಶಸ್ತಿ
## ಹಾಗೂ
## ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಯ ರಾಷ್ಟ್ರೀಯ ಪ್ರಶಸ್ತಿಗಳು-2019

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ, ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಯು, ಸಾರ್ವಜನಿಕ ಸಂಪರ್ಕ ಕ್ಷೇತ್ರದಲ್ಲಿ ಸಂಸ್ಥೆಗಳು ಸಲ್ಲಿಸಿರುವ ಉಪಕ್ರಮಗಳನ್ನು ಗುರುತಿಸಿ ನೀಡುವ **"ಪಿಆರ್‌ಸಿಐ ಎಕ್ಸಲೆನ್ಸ್"** ಪ್ರಶಸ್ತಿಯು 3 ವರ್ಗಗಳಲ್ಲಿ ಲಭಿಸಿರುತ್ತದೆ. ವಿವರಗಳು ಈ ಕೆಳಗಿನಂತಿವೆ:-

1. **ಕೆಎಸ್‌ಆರ್‌ಟಿಸಿಯ ಆಂತರಿಕ ನಿಯತಕಾಲಿಕ 'ಸಾರಿಗೆ ಸಂಪದ'** – ಸಮಸ್ತ ಸಿಬ್ಬಂದಿಗಳಿಗಾಗಿ ಪ್ರಕಟವಾಗುವ ನಿಯತಕಾಲಿಕವಾಗಿದ್ದು, ಸಂಸ್ಥೆಯು ಅನುಷ್ಠಾನಗೊಳಿಸುವ ನೂತನ ಉಪಕ್ರಮಗಳು, ಸಿಬ್ಬಂದಿಗಳು ಹಾಗೂ ಪ್ರಯಾಣಿಕರಿಗಾಗಿ ಜಾರಿಗೆ ತಂದಿರುವ ಸೌಲಭ್ಯಗಳ ವಿವರ, ಸಿಬ್ಬಂದಿ ಹಾಗೂ ಅವರ ಮಕ್ಕಳ ಸಾಧನೆಗಳು ಹಾಗೂ ಇನ್ನಿತರೆ ವಿಶೇಷ ಲೇಖನಗಳನ್ನೊಳಗೊಂಡ ತ್ರೈಮಾಸಿಕ ನಿಯತಕಾಲಿಕ.

2. **'ಅಪಘಾತ ಕುರಿತ ಸಾರ್ವಜನಿಕ ಜಾಗೃತಿ ಸಾಕ್ಷ್ಯಚಿತ್ರ'** – ಬಸ್ಸುಗಳ ಅಪಘಾತದಲ್ಲಿ 69% ಅಪಘಾತಗಳು ದ್ವಿಚಕ್ರ ಸವಾರರು ಹಾಗೂ ಪಾದಾಚಾರಿಗಳ ನಡುವೆ ಸಂಭವಿಸುತ್ತಿದ್ದು, ಬಸ್ಸುಗಳ ಹಾಗೂ ತಮ್ಮ ವಾಹನಗಳ ನಡುವೆ ಸುರಕ್ಷತಾ ಅಂತರ ಕಾಪಾಡುವುದರೊಂದಿಗೆ, ಚಾಲಕರು ವಾಹನ ಚಾಲನೆ ಮಾಡುವಾಗ ಗಮನಕ್ಕೆ ಬಾರದೆ ಇರುವ ಬ್ಲೈಂಡ್ ಸ್ಪಾಟ್ ಗಳ ಬಗ್ಗೆ ಅರಿವು ಮೂಡಿಸುವ ಸಾಕ್ಷ್ಯಚಿತ್ರ.

3. **ಕಾರ್ಪೋರೇಟ್ ಸಾಕ್ಷ್ಯಚಿತ್ರ- 'ಸಾಧನೆಗಳ ಮೈಲಿಗಲ್ಲು'**- ನಿಗಮದ ಇತ್ತೀಚಿನ ಸಾಧನೆ, ಪ್ರಯಾಣಿಕ/ಸಿಬ್ಬಂದಿ/ಪರಿಸರ ಸ್ನೇಹಿ ಉಪಕ್ರಮಗಳ ಮಾಹಿತಿ, ಮುಂದಿನ ಯೋಜನೆಗಳು, ಧ್ಯೇಯೋದ್ದೇಶಗಳನ್ನು ಬಿಂಬಿಸುವ ಸಾಕ್ಷ್ಯಚಿತ್ರ ಇದಾಗಿದೆ.

ಮುಂದುವರೆದು, ಭಾರತೀಯ ಸಾರ್ವಜನಿಕ ಸಂಪರ್ಕ ಮಹಾ ಮಂಡಳಿ ಹಾಗೂ ವಿಶ್ವ ಸಂವಹನ ಮಂಡಳಿಯು, ಫೆಬ್ರವರಿ 15-16ನೇ,2019ರಂದು, ಜೈಪುರ, ರಾಜಾಸ್ಥಾನ, ಇಲ್ಲಿ ಆಯೋಜಿಸಿರುವ 13ನೇ ವಿಶ್ವ ಸಾರ್ವಜನಿಕ ಸಂಪರ್ಕ ಮಂಡಳಿಯ ಸಮ್ಮೇಳನದಲ್ಲಿ ಪ್ರಶಸ್ತಿಗಳನ್ನು ಕೆಎಸ್‌ಆರ್‌ಟಿಸಿಗೆ ಪ್ರದಾನ ಮಾಡಲಾಗುವುದು.

**ಸಹಿ/-**

**ಸಾರ್ವಜನಿಕ ಸಂಪರ್ಕಾಧಿಕಾರಿ**